ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಗುರುವಾರ, ದಿನಾಂಕ ೨೮ನೇ ಜೂನ್ ೧೯೯೦, ಆಷಾಢ ೭, ಶಕ ೧೯೧೨

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೧.೦೦ ಘಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದರು]

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಆಹಾರ ದಳದವರಿಂದ ನಡೆಸಲಾದ ದಾಳಿಗಳು

೯೧೬. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.—

(ಅ) ಆಹಾರ ಇಲಾಖೆಯು ನಿಯಂತ್ರಣದಲ್ಲಿ ಯಾವುದಾದರು ಆಹಾರ ಕೋಶ ಇರುವುದೆ ?

(ಆ) ಹಾಗಿದ್ದಲ್ಲಿ, ೧೯೮೯-೯೦, ೧೯೯೦-೯೧ನೇ ಸಾಲಿನಲ್ಲಿ ಆಹಾರ ಕೋಶವು ಎಷ್ಟು ದಾಳಿಗಳನ್ನು ಮಾಡಿದೆ ?

(ಇ) ೧೯೮೯-೯೦, ೧೯೯೦-೯೧ರ ಸಾಲಿನಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ ;

ಶ್ರೀ ಆಜೀಜ್ ಸೇಟ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

(ಅ) ಹೌದು

(ಆ) ೧೯೮೯-೯೦-೫೫೫-ದಾಳಿಗಳು
೧೯೯೦-೯೧
(ದಿನಾಂಕ ೧೧-೬-೯೦ ರವರೆಗೆ) ೬೯ ದಾಳಿಗಳು

(ಇ) ೧೯೮೯-೯೦

(ಅ) ದಾಖಲಾದ ಪ್ರಕರಣಗಳು ೩೪೯

(ಆ) ದಸ್ತಗಿರಿಯಾದ ಜನರು ೩೧೪

(ಇ) ಜಪ್ತಿ ಮಾಡಲಾದ ಪದಾರ್ಥಗಳ ಮೌಲ್ಯ ರೂ. ೩, ೨೩, ೯೩, ೫೬೧.೦೦

೧೯೯೦-೯೧ (೧೧-೬-೯೦ ರವರೆಗೆ)

(ಅ) ದಾಖಲಾದ ಪ್ರಕರಣಗಳು ೩೯

(ಆ) ದಸ್ತಗಿರಿಯಾದ ಜನರು ೩೮

(ಇ) ಜಪ್ತಿ ಮಾಡಲಾದ ಪದಾರ್ಥಗಳ ಮೌಲ್ಯ ರೂ. ೬೧, ೩೫, ೯೦೭.೫೫

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಈ ವರ್ಷ ಏನು ಅಕ್ರಮವಾಗಿ ಆಹಾರ ಸಂಗ್ರಹಣೆ ಮಾಡಿರತಕ್ಕವರನ್ನು ದಸ್ತಗಿರಿಮಾಡಿ ಸುಮಾರು ಮೂರು ಕೋಟಿ ೨೩ ಲಕ್ಷಕ್ಕೂ ಹೆಚ್ಚು ಜಪ್ತಾದಂಥ ಮಾಲುಗಳು ಸಿಕ್ಕಿವೆ ಅಂತ ಹೇಳಿದ್ದಾರೆ ; ನಾನಾದರೂ ಕೇಳುವುದಕ್ಕೆ ಬಯಸುವುದು ಏನೆಂದರೆ, ಆಹಾರ ಇಲಾಖೆಯ ನಿಯಂತ್ರಣದಲ್ಲಿ ಆಹಾರ ಕೋಶ, (ಫುಡ್ ಸೆಲ್)

ಎನ್ನತಕ್ಕಂತಹದ್ದು ಇದೆಯೇ ? ಏತಕ್ಕೆಂದರೆ, ತಾವು ಕೇಳಿರತಕ್ಕ ಅಧಿಕಾರಿಗಳನ್ನು ಪೋಲೀಸ್ ಇಲಾಖೆಯಿಂದ ನಿಮಗೆ ಹಾಕಿದ್ದಾರೋ ಅಥವಾ ಅವರಿಗೆ ಬೇಕಾದವರನ್ನು ಇಲ್ಲಿಗೆ ಹಾಕಿದ್ದಾರೋ ಎಂಬುದು ಒಂದು. ಎರಡನೆಯದಾಗಿ ಇತ್ತೀಚೆಗೆ ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಭಾರಿ ಹೆಚ್ಚಿನ ಪ್ರಮಾಣದಲ್ಲಿ ಧಾಳಿ ನಡೆದಿದ್ದು, ಆಹಾರ ಮತ್ತಿತರೆ ಪದಾರ್ಥಗಳನ್ನು ಅಕ್ರಮವಾಗಿ ಸಂಗ್ರಹ ಮಾಡಿದ್ದರೂ ಸಹ ಕೇಸ್‌ಗಳ ಮೇಲೆ ಕೇಸ್‌ಗಳನ್ನು ದಾಖಲಿಲ್ಲವೆಂದು ನನಗೆ ಬಂದಿರತಕ್ಕ ಮಾಹಿತಿ ಇದೆ. ಇದರ ಬಗ್ಗೆ ತಾವು ಏಕೆ ಕ್ರಮ ತೆಗೆದುಕೊಂಡಿಲ್ಲ ಎಂಬುದರ ಬಗ್ಗೆ ವಿವರಗಳನ್ನು ಮಾನ್ಯ ಮಂತ್ರಿಗಳು ಕೊಡಬೇಕು.

ಶ್ರೀ ಅಜೀಜ್ ಸೇಠ್–ಆಕ್ಷನ್ ತೆಗೆದುಕೊಂಡಿಲ್ಲವೆಂದು ಹೇಳತಕ್ಕಂಹದ್ದನ್ನು ನಾನು ಈ ಸಂದರ್ಭದಲ್ಲಿ ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ, ತಮಗೆ ನಮೂದು ಮಾಡುತ್ತೇನೆ. We have booked 349 cases and arrested 314 persons. The value of the articles seized is Rs 3,23,93,561. The cases in this behalf are pending at various stages.

ಶ್ರೀ ಪಿ. ಜಿ. ಆರ್. ಸಿಂಧ್ಯ,—ನಾನಂ ತಮ್ಮಲ್ಲಿ ಖಚಿತವಾಗಿ ಪ್ರಶ್ನೆಯನ್ನು ಕೇಳಿದ್ದೇನೆ. ನನ್ನ ಪ್ರಶ್ನೆಗೆ ಉತ್ತರ ಸಿಕ್ಕಿಲ್ಲ. ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಧಾಳಿ ನಡೆದಿರತಕ್ಕ ಸಂದರ್ಭಗಳಲ್ಲಿ ಅವರು ಏನು ಆಹಾರ ಮತ್ತಿತರೆ ಪದಾರ್ಥಗಳನ್ನು ಅಕ್ರಮವಾಗಿ ಇಟ್ಟಿದ್ದರು, ಅವುಗಳನ್ನು ಫುಡ್‌ಸೆಲ್ ನವರು ತೆಗೆದುಕೊಂಡರು. ಆದರೆ ಅವರ ಮೇಲೆ ಕೇಸನ್ನು ದಾಖಲೆ ಮಾಡಿಲ್ಲ ಎಂಬ ವಿಚಾರವನ್ನು ನಾನು ಕೇಳಿದ್ದೇನೆ. ಆದ್ದರಿಂದ ಏಕೆ ಮಾಡಿಲ್ಲ ಎಂದು ಕೇಳುತ್ತೇನೆ.

SRI AZIZ SAIT.—Sir, he is asking a specific question pertaining to Chitradurga and Shimoga. I require Notice.

ಶ್ರೀ ಪಿ. ಜಿ. ಆರ್. ಸಿಂಧ್ಯ. ಇದಕ್ಕೆ ಏಕೆ ನಿರ್ದಿಷ್ಟ ಪ್ರಶ್ನೆಯನ್ನು ಕೇಳಬೇಕು. ಇದೇ ವಿವರಗಳನ್ನೇ ನಾನು ನನ್ನ ಪ್ರಶ್ನೆಯಲ್ಲಿ ಕೇಳಿದ್ದೇನೆ. ಈ ವರ್ಷ ಎಷ್ಟು ದಾಳಿಗಳನ್ನು ಮಾಡಿದ್ದೀರಿ ಎಂದು ಕೇಳಿದ್ದೇನೆ. ೩ ದಿವಸಗಳ ಹಿಂದೆ ಇದೇ ವಿಚಾರದ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದಂತಹ ಸಂದರ್ಭದಲ್ಲಿ ಶಿವಮೊಗ್ಗ ಜಿಲ್ಲೆಯ ಮಾನ್ಯ ಜಿಲ್ಲಾಧಿಕಾರಿಗಳು ಮಾಡಿರತಕ್ಕ ರೈಡ್ಸ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮತ್ತೆ ನಿನ್ನೆ ಶ್ರೀಮಾನ್ ಏಕಾಂತಯ್ಯನವರು ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿಯೂ ಕೂಡ ಇದರ ಬಗ್ಗೆ ಹೇಳಿದ್ದಾರೆ. ನಾನೂ ಮಂತ್ರಿಯಾಗಿ ಸ್ವಲ್ಪ ದಿವಸ ಕೆಲಸ ಮಾಡಿದ್ದೇನೆ. ಹೀಗೆ ಪ್ರತಿಯೊಂದಕ್ಕೂ ಟಿಕ್ಕಿಕಲ್ ಆಗಿ ಸೈಸಿಫಿಕ್ ಕೊಶ್ಚನ್ ಕೇಳಿ ಅಂದರೆ ಈ ಪ್ರಶ್ನೋತ್ತರಕ್ಕೆ ಅರ್ಥವೇ ಇರುವುದಿಲ್ಲ. ಏಕೆಂದರೆ, ಮಾನ್ಯ ಮಂತ್ರಿಗಳು ಸಂಬಂಧಪಟ್ಟ ಅಧಿಕಾರಿಗಳೊಡನೆ ಕುಳಿತು ಮಾನ್ಯ ಸದಸ್ಯರು ಯಾವ ಪ್ರಶ್ನೆಯನ್ನು ಹಾಕಿರುತ್ತಾರೆ, ಅದರ ಬಗ್ಗೆ ಟಿಪ್ಪಣಿಯನ್ನು ತಿಳಿದುಕೊಂಡೇಬಂದಿರುತ್ತಾರೆ. You have been a Minister for 4–5 times.

SRI AZEEZ SAIT.—Sir, to the question of the hon. Member as to how many raids have been made by the Food Cell in the year 1989.90, and 1990–91 I have replied. To question (c)Number of cases registered in 1989–90and 1990–91 (Please furnish the details) I have given the detailedreply which the hon. Member has asked for. The hon. Member is asking a specific question about the raids in Shimoga and Chitradurga. Right now I do not have the facts. However, later during the course of my reply to the debate on Demands for Grants. I will reply to this. When the Hon. Leader of the Opposition raised this during the debate on demands for grants pertaining to Revenue Department. I was not here. Yesterday, while initiating the debate, Sri Ekantaiah has brought to my notice about this. I will answer to this during the course of my reply to the debate.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಆಕ್ರಮ ದಾಸ್ತನು ಮಾಡಿರುವುದರ ಬಗ್ಗೆ ಕೇಂದ್ರ ಸರ್ಕಾರದ ಇತ್ತೀಚೆಗೆ ವಿಶೇಷ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ರಾಜ್ಯ ಸರ್ಕಾರಕ್ಕೆ ಸೂಚನೆಯನ್ನು ಕಳುಹಿಸಿದೆಯೇ ? ಕಳಿಸಿದ್ದರೆ ಅದರ ಬಗ್ಗೆ ತಾವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ? Have you received communication from the Centre ?

SRI AZEEZ SAIT.—Yes I have received. We have already started raids even before receiving the communication by the Government of India. Even before communication from them, my Government initiated raids on such hoarders.

SRI M. MALLIKARJUNA KHARGE.—May I know in how many cases, the Government has raided and how many cases have been registered against hoarders and blackmarketeers ?

SRI AZEEZ SAIT.—The cases registered 349, persons arrested 340. These cases are peuding at various stages.

ನಿಪ್ಪಾಣಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಹೊಸ ಬಸ್ ಘಟಕ ನಿರ್ಮಾಣ.

೭೦೪. ಶ್ರೀ ಸುಭಾಶ್ ಜೋಶಿ (ನಿಪ್ಪಾಣಿ).—ಮಾನ್ಯ ರಾಜ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ನಿಪ್ಪಾಣಿಯಲ್ಲಿ ಕ.ರಾ.ರ.ಸಾ. ಸಂಸ್ಥೆಯ ಹೊಸ ಬಸ್ ಘಟಕವನ್ನು ಯಾವ ದಿನಾಂಕ ವಂಂಜೂರು ಮಾಡಲಾಯಿತು ?

(ಆ) ಹಾಗಿದ್ದರೆ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಕೆ. ಜೆ. ಜಾರ್ಜ್ (ರಾಜ್ಯ ಸಾರಿಗೆ ಸಚಿವರು).—

(ಅ) ವಂಂಜೂರು ಮಾಡಿರುವುದಿಲ್ಲ.

(ಆ) ಉದ್ಭವಿಸುವುದಿಲ್ಲ.

SRI SUBHASH JOSHI.—Sir, Nipani is an entry point to Karnataka and the situation of Bus-stand and Depot at Nipani is very pitiable. I aequest the Hon. Minister to sanction this immediately and start the work.

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬಸ್ ಡಿಪೋ ವಿಚಾರವನ್ನು ಕೇಳಿದ್ದಾರೆ. ಅದರ ವಿಚಾರ ಪರಿಶೀಲನೆಯಲ್ಲಿ ಇಲ್ಲ ಎಂದು ಹೇಳಿದ್ದೇನೆ. ಆದರೆ ಬಸ್ ಸ್ಟ್ಯಾಂಡ್ ಬಗ್ಗೆ ಅವರು ಏನು ಹೇಳಿದ್ದಾರೆ ಅದರ ಬಗ್ಗೆ ಪರಿಶೀಲನೆ ಮಾಡಿ ಆದಷ್ಟು ಬೇಗನೆ ಮಾಡುತ್ತೇವೆ.

ಹಿಪ್ಪರಗಿ ಅಣೆಕಟ್ಟಿನ ಯೋಜನೆ

೧೧೫೩. ಶ್ರೀ ಎ. ಬಿ. ಜಮನೂರು (ಕಗ್ವಾಡ್).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಹಿಪ್ಪರಗಿ ಅಣೆಕಟ್ಟಿನ ಯೋಜನೆ "ಯೋಜನೆ ಆಡಿಯಲ್ಲಿ" ಸೇರಿಸಲಾಗಿದೆಯೇ ?

(ಆ) ಇದು ಈಗ ಯಾವ ಹಂತದಲ್ಲಿದೆ.

(ಇ) ಇದೂವರೆವಿಗೂ ಖರ್ಚು ಮಾಡಿರುವ ಹಣವೆಷ್ಟು ?

(ಈ) ಬೇಸಿಗೆಯಲ್ಲಿ ಕುಡಿಯುವ ನೀರಿಗಾಗಿ ಹೆಚ್ಚಿನ ಹಣವನ್ನು ಮಹಾರಾಷ್ಟ್ರ ಸರ್ಕಾರಕ್ಕೆ ಕೊಟ್ಟು ಕೃಷ್ಣಾ ನದಿಗೆ ನೀರು ಬಿಡಿಸಲಾಗುತ್ತಿರುವುದು ನಿಜವಲ್ಲವೇ ?

(ಉ) ಹಿಪ್ಪರಗಿ ಅಣೆಕಟ್ಟು ಅಡಿಯಲ್ಲಿ ಕೃಷ್ಣಾ ನದಿಯ ನೀರನ್ನು ಶೇಖರಣೆ ಮಾಡುವುದು ಜನಗಳ ಉಪಯೋಗಕ್ಕಾಗಿ ಅತ್ಯಗತ್ಯವೆಂಬುದು ಸರ್ಕಾರದ ಗಮನದಲ್ಲಿದೆಯೇ ?